ಓ ಎಸ್ .ನಂ.**766/2023**

**ಪಿಡಬ್ಲ್ಯು – 1**

ದಿನಾಂಕ **01-12-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು**.**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಈ ದಾವೆಯನ್ನು ನಾನು ಜಮೀನು ಬಿಡಿಸಿಕೊಡಬೇಕು ಎಂದು ಹಾಕಿರುತ್ತೇನೆ. ನನ್ನ ಪ್ರಮಾಣ ಪತ್ರದ ಸಂಗತಿಯನ್ನು ನಾನೇ ಹಾಕಿರುತ್ತೇನೆ. ನನ್ನ ಅಜ್ಜ ಮೂಲತಃ ಧಾರವಾಡ ತಾಲೂಕಿನ ಬಾಡ ಗ್ರಾಮದವರು ಎಂದರೆ ಸರಿ. ಅಲ್ಲಿ ನಮ್ಮ ಮನೆತನದವರ ಹೆಸರು ಪರಸಪ್ಪನವರ ಎಂದು ಇತ್ತು ಎಂದರೆ ಸರಿ. ದಾವಾ ಆಸ್ತಿಗೆ ಬಂದ ನಂತರ ವಾಲೀಕಾರ ಎಂದು ನಮ್ಮ ಅಡ್ಡ ಹೆಸರು ಮಾಡಿಕೊಂಡಿದ್ದೇವೆ ಎಂದರೆ ಸರಿ. ಪ್ರತಿವಾದಿಯರು ನಮ್ಮ ದೂರದ ಸಂಬಂಧಿಕರು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಸುಮಾರು 80 ವರ್ಷಗಳಿಂದ ವಾಸವಿದ್ದಾರೆ ಎಂದರೆ ಸಾಕ್ಷಿಯು ಆಸ್ತಿ ನಂ.67 ರಲ್ಲಿ ಯಾರೂ ಇಲ್ಲ, ನಾವೇ ಇದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿಯರು ದೂರದ ಸಂಬಂಧಿಕರು ಆಗಿದ್ದರಿಂದ ನಮಗೆ ಇರಲು ಜಾಗ ಇಲ್ಲದಿದ್ದರಿಂದ ದಾವಾ ಆಸ್ತಿಯಲ್ಲಿ ಜಾಗ ಕೇಳಿದ್ದರು ಹಾಗಾಗಿ ನಮಗೆ ಜಾಗವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಮಾನವೀಯತೆ ದೃಷ್ಟಿಯಿಂದ ಪ್ರತಿವಾದಿಯರು ನಮಗೆ ತಮ್ಮ ಜಾಗದಲ್ಲಿ ಜಾಗ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಧನಕರುಗಳಿಗೂ ಜಾಗ ಬೇಕಾಗಿದ್ದರಿಂದ ನಮಗೆ 2 ಗುಂಟೆ ಜಾಗೆಯನ್ನು ಪ್ರತಿವಾದಿಯರು ಕೊಟ್ಟಿದ್ದರು ಎಂದರೆ ಸರಿಯಲ್ಲ.

2. ದಿಃ19–11–1981 ರಲ್ಲಿ ನಮ್ಮ ತಂದೆಯವರು ಹುಡುಕೋ ಯೋಜನೆಯಲ್ಲಿ ಜನತಾ ಮನೆಗೆ ಅರ್ಜಿ ಹಾಕಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ಅರ್ಜಿಯನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿರುತ್ತಾರೆ, ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ನಿಡಿ.1 ರಲ್ಲಿ 30x45 ವಿಸ್ತೀರ್ಣ ಇದೆ ಎಂದು ನಮೂದು ಮಾಡಿದೆ ಎಂದರೆ ಸರಿ. ಯರಿಕೊಪ್ಪ ಗ್ರಾಮ ಪಂಚಾಯಿತಿಯಲ್ಲಿ 67

ನೇ ಮನೆ ನಂಬರ್ ನಮ್ಮದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಮ್ಮ ವಾದ ಪತ್ರದಲ್ಲಿ 1650 ಸ್ಕೇಯರ ಮೀಟರ್ ಎಂದು ತಪ್ಪಾಗಿ ನಮೂದು ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ ಬಂದಿಗಳು ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಶಿವಪುತ್ರಪ್ಪ ರೊಟ್ಟಿ ಇವರ ಆಸ್ತಿ, ಉತ್ತರಕ್ಕೆ ಸರಕಾರಿ ರಸ್ತೆ, ದಕ್ಷಿಣಕ್ಕೆ ಕರಿಯಪ್ಪ ವಾಲೀಕಾರರವರ ಆಸ್ತಿ ಇರುತ್ತದೆ. ಆಸ್ತಿ ನಂ, 67 ಕ್ಕೆ ಉದ್ದ ಎಷ್ಟು ಅಗಲ ಎಷ್ಟು ಎಂಬುದನ್ನು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

3. ಅಂಬೇಡ್ಕರ ವಸತಿ ಯೋಜನೆ ಅಡಿಯಲ್ಲಿ ನನ್ನ ತಾಯಿಯವರು 2015–16 ರಲ್ಲಿ ಮನೆ ಮಂಜೂರಾತಿಗಾಗಿ ಅರ್ಜಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ 35x26 ವಿಸ್ತೀರ್ಣ ದ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ಚೆಕಬಂದಿಗಳು ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಫಕ್ಕೀರಪ್ಪ ವಾಲೀಕಾರರವರ ಆಸ್ತಿ ಎಂದರೆ ಸರಿಯಲ್ಲ. ಉತ್ತರಕ್ಕೆ ಫಕ್ಕೀರಪ್ಪ ವಾಲೀಕಾರರವರ ಆಸ್ತಿ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಕರಿಯಪ್ಪ ವಾಲೀಕಾರರವರ ಆಸ್ತಿ ಇರುತ್ತದೆ ಎಂದರೆ ಸರಿ. ಈ ರೀತಿ ಚೆಕಬಂದಿಗಳನ್ನು ನಮೂದು ಮಾಡಿ ನನ್ನ ತಾಯಿಯವರು ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ.

4. ನಿಪಿ.5 ದಾಖಲೆಯನ್ನು ಕಂದಾಯ ಅಧಿಕಾರಿಗಳ ಜೊತೆಗೆ ಶಾಮೀಲು ಆಗಿ ಅದರಲ್ಲಿ ವಿಸ್ತೀರ್ಣ 1650 ಚದರ ಮೀಟರ ಎಂದು ನಮೂದು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸದರಿ ಮಾಹಿತಿ ಬಂದ ನಂತರ ಅದಕ್ಕೆ ಅವರು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ತಪ್ಪಾಗಿ ವಿಸ್ತೀರ್ಣವನ್ನು ನಮೂದು ಮಾಡಿಕೊಂಡಿದ್ದರಿಂದ ಉಪನಿರ್ದೇಶಕರು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪತ್ರ ಬರೆದು ತನಿಖೆ ಮಾಡಲು ಕೋರಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ದೃಢೀಕೃತ ಪತ್ರವನ್ನು ನೋಡಿ

ಗುರುತಿಸಿದ್ದು ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ತನಿಖೆ ಮಾಡಲು ವಿಳಂಬ ಮಾಡಿದ್ದರಿಂದ ದಿಃ13-05-2024 ರಂದು ಉಪನಿರ್ದೇಶಕರವರು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಶೀಘ್ರವಾಗಿ ತನಿಖೆ ಮಾಡಲು ಮತ್ತೊಂದು ಪತ್ರ ಬರೆದರು ಎಂದು ಸಾಕ್ಷಿಗೆ ದೃಢೀಕೃತ ಪ್ರತಿಯನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.4 ಎಂದು ಗುರುತಿಸಲಾಯಿತು.

5. ದಿಃ29-11-2025 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರು ನಮಗೆ ಹಾಜರು ಇರಲು ನೋಟಿಸುಕೊಟ್ಟಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಪಿಡಬ್ಲ್ಯು – 1**

ಓ ಎಸ್ .ನಂ.**766/2023**

**ಪಿಡಬ್ಲ್ಯು – 1**